# ನಂ ನಂ ನಮ್ಮ ಮೆಟ್ರೋ

ಬಂದಿತು ಬಂದಿತು ಬಂದೇ ಬಿಟ್ಟಿತು ನಮ್ಮಯ ಬೆಂಗ್ಳೂರ್ ಮೆಟ್ರೋ।
ಹೊಗೆಯುಗುಳದ, ತಿಳಿತಿಳಿಗೊಳಿಸುವ ಪರಿಸರ ಸ್ನೇಹಿ ನಂಮೆಟ್ರೋ॥

ಕೇಂದ್ರ-ರಾಜ್ಯ ಸಹಭಾಗಿತ್ವ, ಶಿವಶೈಲಂ ನೇತೃತ್ವ
ಪಹುಜ -ಸುಧೀರ ಚಂದ್ರರ ಅನುಭವಿ ಸಾರಥ್ಯ
ಬಂದೇ ಬಿಟ್ಟಿತು ಬಂದೇ ಬಿಟ್ಟಿತು ನಮ್ಮಯ ನಿಮ್ಮಯ ಹೆಮ್ಮೆಯ ಮೆಟ್ರೋ॥

ಇಪ್ಪತ್ತರ ಅಕ್ಟೋಬರ್ ಎರಡುಸಾವಿರ ಹನ್ನೊಂದು
ಬಿ.ಎಂ.ಆರ್.ಸಿ.ಎಲ್ ಸ್ಥಾಪಿಸುತ್ತಿದೆ ಮೈಲಿಗಲ್ಲು ಹೊಸದೊಂದು ॥
ಸಾರ್ವಜನಿಕರಿಗೆ ಸಿಗುವುದು ಮೆಟ್ರೋ ಪ್ರಯಾಣ
ಅದರಿಂದ ಹರ್ಷಿತರಾಗುವರು ಬೆಂಗ್ಳೂರ್ ಜನ॥
ಬಂದೇ ಬಿಟ್ಟಿತು ಬಂದೇ ಬಿಟ್ಟಿತು ನಮ್ಮಯ ನಿಮ್ಮಯ ಹೆಮ್ಮೆಯ ಮೆಟ್ರೋ॥

ಬೆಳಗಿನಿಂದ ಸಂಜೆಯವರೆಗೂ ಸಂಚಾರ ದಟ್ಟಣೆ
ಸಮಯಕ್ಕೆ ತಲುಪಲಾಗುತ್ತಿಲ್ಲ ಕೆಲಸಕ್ಕೆ, ಬೈಕು ಕಾರುಗಳಿಗೆ ಬಸ್ಸುಗಳ ಅಡಚಣೆ
ತಂದೀತು ಮೆಟ್ರೋ ಖಂಡಿತವಾಗಿ ಬೆಂಗಳೂರು ಜನಜೀವನದಲ್ಲಿ ಸುಧಾರಣೆ
ನೀಗೀತು ಸ್ವಲ್ಪ ಮಟ್ಟಿಗಾದರೂ ಸಂಚಾರ ದಟ್ಟಣೆಯ ಅಡಚಣೆ॥
ಬಂದೇ ಬಿಟ್ಟಿತು ಬಂದೇ ಬಿಟ್ಟಿತು ನಮ್ಮಯ ನಿಮ್ಮಯ ಹೆಮ್ಮೆಯ ಮೆಟ್ರೋ॥

ಮೆಟ್ರೋ ರೈಲು ಓಡುತ್ತದೆ ಮೇಲ್ ಸೇತುವೆ-ಸುರಂಗ ಮಾರ್ಗಗಳಲ್ಲಿ ಜಾಸ್ತಿ
ಅದರಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ಧಕ್ಕೆಯಾಗುತ್ತಿಲ್ಲ ಸಾರ್ವಜನಿಕರ ಆಸ್ತಿ ಪಾಸ್ತಿ॥
ನಿಲ್ಲಬಹುದು ಸ್ವಲ್ಪ ಮಟ್ಟಿಗಾದರೂ ದ್ವಿಚಕ್ರ-ತ್ರಿಚಕ್ರ ವಾಹನಗಳ ಓಡಾಟ
ತಡೆಯಬಹುದು ಇದರಿಂದಾಗಿ ದಿನನಿತ್ಯ ಉಂಟಾಗುವ ಅಪಘಾತ॥
ಬಂದೇ ಬಿಟ್ಟಿತು ಬಂದೇ ಬಿಟ್ಟಿತು ನಮ್ಮಯ ನಿಮ್ಮಯ ಹೆಮ್ಮೆಯ ಮೆಟ್ರೋ॥

ಹವಾನಿಯಂತ್ರಿತ ನಮ್ಮಯ ರೈಲು

ವಿದ್ಯುತ್ ಹರಿಯಲು ಬಳಸಿದ್ದೇವೆ Third ರೈಲು

ಮಕ್ಕಳು ಮುದುಕರಿಗೆ ಸಲೀಸಾಗಿರುವ ಈ ವ್ಯವಸ್ಥೆ

ಅಂಧರಿಗೂ ಇಲ್ಲಿದೆ ಸುವ್ಯವಸ್ಥೆ

ಬಂದೇ ಬಿಟ್ಟಿತು ಬಂದೇ ಬಿಟ್ಟಿತು ನಮ್ಮಯ ನಿಮ್ಮಯ ಹೆಮ್ಮೆಯ ಮೆಟ್ರೋ॥

ಹತ್ತಲು ಇಳಿಯಲು ಎಸ್ಕಲೇಟರುಗಳು

ವಿಕಲ ಚೇತನರಿಗೆ ಎಲಿವೇಟರುಗಳು

ಕನ್ನಡ – ಇಂಗ್ಲಿಷ್-ಹಿಂದಿ ನಾಮ ಫಲಕಗಳು

ಇದೆಲ್ಲ ಮೆಟ್ರೋ ಟೀಮಿನ ಪ್ರಯತ್ನ ದ ಫಲಗಳು

ಬಂದೇ ಬಿಟ್ಟಿತು ಬಂದೇ ಬಿಟ್ಟಿತು ನಮ್ಮಯ ನಿಮ್ಮಯ ಹೆಮ್ಮೆಯ ಮೆಟ್ರೋ॥

ಬನ್ನಿರಿ ಹರಸಿರಿ ನಮ್ಮ ಮೆಟ್ರೋ ಗೆ

ಸಾಗಲಿ ಪ್ರಯತ್ನ ಸುಸಜ್ಜಿತ ಬೆಂಗಳೂರು ಕಟ್ಟುವೆಡೆಗೆ

ಕೆಂಪೇಗೌಡನ ಬೆಂಗಳೂರು ನಗರಿ

ಆಗಲಿ ಮೆಟ್ರೋ ಸಂಚಾರದಿಂದ ವೈಭವ ನಗರಿ॥

ಬಂದೇ ಬಿಟ್ಟಿತು ಬಂದೇ ಬಿಟ್ಟಿತು ನಮ್ಮಯ ನಿಮ್ಮಯ ಹೆಮ್ಮೆಯ ಮೆಟ್ರೋ॥

ಇಂದ,

ಶಶಿಕಾಂತ ಡೋಂಗ್ರೆ.

**Finance Section, BMRCL**